ಮಾಡುವುದಕ್ಕೆ ಸಾಧ್ಯತೆ ಇದೆ. ಅವರೇ ಇದರಲ್ಲಿರತಕ್ಕ ಸಾಮಗ್ರಿಗಳನ್ನು ತೆಗೆದುಕೊಂಡು ಬಂದು ಕಟ್ಟಡವನ್ನು ಕಟ್ಟುವುದಕ್ಕೆ ನಾವು ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಆದರೂ ಕೂಡ ಕೆಲವು ಕಡೆ ಫಲಾನುಭವಿಗಳು, ಬಡತನ ಸೀಮಾ ರೇಖೆಗಿಂತ ಕೆಳಗಡೆ ಇರತಕ್ಕವರಿಗೆ ತಾವು ಅನುಕೂಲ ಮಾಡಿಕೊಡಬೇಕು ಎನ್ನುವುದರಿಂದ ಕೆಲವೊಂದು ಜಿಲ್ಲಾ ಪಂಚಾಯತ್‌ಗಳಿಗೆ ಇಲಾಖೆಯಿಂದ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಾರೆ. ಇದರಲ್ಲಿ ಕೆಲವು ಕಡೆ ಕಳಪೆ ಮಾಲುಗಳು ಬಂದಿವೆ ಎನ್ನತಕ್ಕ ದೂರು ಸಹಿತ ಇದೆ. ಅದಕ್ಕೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಒಂದು ಖರೀದಿ ಸಮಿತಿ ಎನ್ನತಕ್ಕದ್ದು ಇದೆ. ಜಿಲ್ಲಾ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಸ್ಥಾಯೀ ಸಮಿತಿಯ ಅಧ್ಯಕ್ಷರು ಒಂದು ಅಧಿಕೃತವಾದ ವಿರೋಧ ಪಕ್ಷದ ಒಬ್ಬ ಸದಸ್ಯರು ಇದರಲ್ಲಿ ಸದಸ್ಯರಾಗಿರುತ್ತಾರೆ. ಅವರು ಇದರ ಬಗ್ಗೆ ಹೆಚ್ಚು ಮಾಹಿತಿಯನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಕಟ್ಟುನಿಟ್ಟಾಗಿ ಆ ಉಪಕರಣಗಳ ಗುಣಮಟ್ಟವನ್ನು ಕಾಪಾಡಿಕೊಳ್ಳತಕ್ಕದ್ದನ್ನು ಮಾಡಬೇಕಾಗುತ್ತದೆ. ನಿರ್ದಿಷ್ಟವಾದ ಪ್ರಕರಣವನ್ನು ತಾವು ನಮ್ಮ ಗಮನಕ್ಕೆ ತರುವುದಿದ್ದರೆ ನಾನು ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಕ್ವೊಶ್ಚನ್ ಅವರ್ ಬಿಟ್ಟು 15 ನಿಮಿಷ ಮುಂದೆ ಹೋಗಿದ್ದೇವೆ. ಸಪ್ಲಿಮೆಂಟರಿ ಪ್ರಶ್ನೆಗಳು ಇಲ್ಲ, ಕೋ ಆಪರೇಟ್ ಮಾಡಿ ದಯವಿಟ್ಟು.

ವಿಷಯ:- ಪ್ರೌಢಶಾಲಾ ಮುಖ್ಯೋಪಾಧ್ಯಾಯರಿಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 135 (629)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ನಿಯಮ 32ರ ಮೇರೆಗೆ ನೇಮಿಸಲಾದ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಖ್ಯೆ ಎಷ್ಟು? ಇವರಲ್ಲಿ ಈವರೆಗೆ ನಿವೃತ್ತಿಯಾದವರೆಷ್ಟು?

ಆ) ಈವರೆಗೂ ಇವರಿಗೆ ಖಾಯಂ ಪದೋನ್ನತಿ ಬಡ್ತಿ ನೀಡದಿರಲು ಕಾರಣಗಳೇನು?

ಇ) ಇವರಿಗೆ ಖಾಯಂ ಪದೋನ್ನತಿ ನೀಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ನಿಯಮ 32ರನ್ವಯ ಕಳೆದ ಮೂರು ವರ್ಷಗಳಿಂದ ನೇಮಕವಾದ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಸಂಖ್ಯೆ - 475.

ಇವರುಗಳಲ್ಲಿ ನಿವೃತ್ತಿಯಾದವರ ಸಂಖ್ಯೆ - 55.

ಆ) ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಬಡ್ತಿಯನ್ನು ನೀಡಲಾಗುವುದು. ಕೆಸಿಎಸ್ಆರ್ ನಿಯಮ 32ರನ್ವಯ ಮುಖ್ಯ ಶಿಕ್ಷಕರ ವೃಂದದಲ್ಲಿ ಸ್ವತಂತ್ರ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 1105 ಶಿಕ್ಷಕರ ಪೈಕಿ 351 ಜನಕ್ಕೆ ಸ್ಥಾನಪನ್ನ ಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಗಾಗಿ ಬರೆಯಲಾಗಿದೆ. ಸದರಿ ಆಯೋಗದ ಸಹಮತಿ ದೊರಕಿದ ಕೂಡಲೇ ಇವರಿಗೆ ಸ್ಥಾನಪನ್ನ ಬಡ್ತಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು. ಉಳಿದವರಿಗೆ ಬಡ್ತಿ ಮೂಲಕ ಲಭ್ಯವಾಗುವ ಹುದ್ದೆಗಳನ್ನು ಆಧರಿಸಿ ಸ್ಥಾನಪನ್ನ ಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ ಶೀಘ್ರವಾಗಿ ತೀರ್ಮಾನಿಸಿ ಲೋಕಸೇವಾ ಆಯೋಗದ ಸಹಮತಿ ಪಡೆದು ಹಂತ ಹಂತವಾಗಿ ಬಡ್ತಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಕೆಸಿಎಸ್ಆರ್ ನಿಯಮ 32ರನ್ವಯ ಮುಖ್ಯ ಶಿಕ್ಷಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 351 ಶಿಕ್ಷಕರಿಗೆ ಸ್ಥಾನಪನ್ನ ಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿ ಲೋಕಸೇವಾ ಆಯೋಗದ ಸಹಮತಿಗಾಗಿ ಬರೆಯಲಾಗಿದೆ. ಸಹಮತಿ ದೊರಕಿದ ಕೂಡಲೇ ಸ್ಥಾನಪನ್ನ ಬಡ್ತಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ನಮ್ಮ ಗ್ರಾಮೀಣ ಪ್ರದೇಶದಲ್ಲಿ ಒಂದು ನಾಣ್ನುಡಿ ಪ್ರಚಲಿತದಲ್ಲಿದೆ. 'ಸಂಬಳ ಇಲ್ಲ, ಸಾರಿಗೆ ಇಲ್ಲ, ನನ್ನ ಗಂಡ ಜಮೇದಾರ' ಎಂದು ಹೇಳುವಂತಹ ನಾಣ್ನುಡಿ ಇದೆ. ಆರ್ಟಿಕಲ್ 32ರ ಅಡಿಯಲ್ಲಿ ನಿಯುಕ್ತರಾಗಿರತಕ್ಕಂಥ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಈ ನಾಣ್ನುಡಿಗೆ ಅನುಗುಣವಾಗಿ ಇವತ್ತು ಇದ್ದಾರೆ. ಅವರಿಗೆ ಹುದ್ದೆ ಕೊಟ್ಟಿದ್ದೀರಿ, ಸಂಬಳ ಸೌಲಭ್ಯ ಕೊಡುತ್ತಿಲ್ಲ. ಅವರನ್ನು ಹಾಗೆಯೇ ದುಡಿಸಿಕೊಳ್ಳುತ್ತಿದ್ದೀರಿ. ತಾವು ಹೇಳುತ್ತೀರಿ ಇಲ್ಲಿ ಪರ್ಮನೆಂಟ್ ಮಾಡುತ್ತೇವೆಂದು ಕಳೆದ ವರ್ಷ ಕೂಡ ತಾವು ಪರ್ಮನೆಂಟ್ ಮಾಡುತ್ತೇವೆಂದು ಹೇಳಿದ್ದೀರಿ. ಇದುವರೆಗೂ ಕೂಡ ಮಾಡಿಲ್ಲ. ಲೋಕಸೇವಾ ಆಯೋಗಕ್ಕೆ ಬರೆದು ಕಳಿಸಿದ್ದೇವೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದೀರಿ. ಯಾವ ತಾರೀಖಿನಲ್ಲಿ ಲೋಕಸೇವಾ ಆಯೋಗಕ್ಕೆ ಬರೆದಿದ್ದೀರಿ? ಯಾವ ತಾರೀಖಿಗೆ ಕಳಿಸಿಕೊಡಬೇಕು ಎನ್ನುವಂತಹ ನಿಯಂತ್ರಣವನ್ನು ಏನಾದರೂ ಅವರ ಮೇಲೆ ಹಾಕಿದ್ದೀರೊ? ಯಾವಾಗ ಇವರನ್ನು ಖಾಯಂ ಮಾಡುತ್ತೀರಿ? ನೀವು ಖಾಯಂ ಮಾಡುವುದರೊಳಗೆ, ಈಗಾಗಲೇ ಅನೇಕರು ನಿವೃತ್ತಿಯ ಅಂಚಿನಲ್ಲಿದ್ದಾರೆ. ಇನ್ನೆಷ್ಟು ಜನನಿವೃತ್ತಿ ಆದ ನಂತರ ಮಾಡಬೇಕು ಎನ್ನುವಂತಹ ಆಲೋಚನೆ ಏನಾದರೂ ಸರ್ಕಾರದಲ್ಲಿದೆಯೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನನ್ನ ಸ್ನೇಹಿತರಾಗಿರತಕ್ಕ ಮಾನ್ಯ ಅರಗ ಜ್ಞಾನೇಂದ್ರ ಅವರಿಗೆ ಏನೊಂದು ಕಾಳಜಿ ಇದೆ, ಅಷ್ಟೇ

ಕಾಳಜಿ ನನಗೂ ಸಹ ಇದೆ. ಬಹುಶಃ ಈ ಒಂದೂವರೆ ವರ್ಷದ ಅವಧಿಯಲ್ಲಿ ಅನೇಕ ಸಾರಿ ಉಪಾಧ್ಯಾಯರುಗಳು ಮನವಿ ಕೊಟ್ಟಿದ್ದಾರೆ. ಸಮಾರಂಭಗಳನ್ನು ಏರ್ಪಾಡು ಮಾಡಿ, ಅವರ ಕಷ್ಟ ಸುಖಗಳೇನು ಇದೆ ಎಂದು ಹೇಳಿದ್ದಾರೆ. ಆ ಆರ್ಟಿಕಲ್ 32ರ ಬಗ್ಗೆ ಸರ್ಕಾರ ತುಂಬಾ ಗಂಭೀರವಾಗಿ ಯೋಚನೆ ಮಾಡುತ್ತಿದೆ. ಈಗಾಗಲೇ ನಾವು ಇದರ ಬಗ್ಗೆ ಮಾಹಿತಿ ಕೊಡುವುದಾದರೆ ಇದು ಗೆಜೆಟೆಡ್ ಹುದ್ದೆ. ಡಿಪಿಸಿ ಆಗದೇ ಈ ಒಂದು ಆರ್ಟಿಕಲ್ 32ರ ಪ್ರಕಾರ ನಾವು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಡಿಪಿಸಿ ಆದ ಮೇಲೆ ಇದನ್ನು ಕೆಪಿಎಸ್‌ಸಿಯವರಿಗೆ ಕಳುಹಿಸಿಕೊಡತಕ್ಕದ್ದು. ಕೆಪಿಎಸ್‌ಸಿಯವರು ಇದನ್ನು ಸೆಲೆಕ್ಟ್ ಮಾಡತಕ್ಕದ್ದು. ಒಟ್ಟು ಹುದ್ದೆಯಲ್ಲಿ ಅರ್ಧ ಭಾಗ ಮಾತ್ರ ಇದಕ್ಕೆ ಅವಕಾಶ ಇರತಕ್ಕದ್ದು. ಈ ಕೆಪಿಎಸ್‌ಸಿಗೆ ಅನುಮತಿಗಾಗಿ ಕಳಿಸಿಕೊಡಲಾಗಿದೆ. ಅದು ನಮಗೆ ನಿಯಂತ್ರಣ ಇಲ್ಲದೇ ಇರತಕ್ಕ ವಿಷಯ. ಅವರೂ ಸಹ ಇಂಡಿಪೆಂಡೆಂಟ್ ಆಗಿ ಕೆಲಸ ಮಾಡುತ್ತಿರತಕ್ಕ ಒಂದು ಸಂಸ್ಥೆ. ಕಳಿಸಿಕೊಟ್ಟು ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ, ದಯವಿಟ್ಟು ಜಾಗ್ರತೆ ಕಳಿಸಿಕೊಡಿ ಎಂದು. ಬೇರೆ ನಾವು ಕೆಳಗಡೆ ಇರತಕ್ಕ ನೌಕರರ ಹಾಗೆ ಇಷ್ಟು ದಿವಸದೊಳಗೆ ನೀವು ಕಳಿಸಿಕೊಡಬೇಕು, ನೀವು ಮಾಡದೇ ಇದ್ದರೆ ಆಗುವುದಿಲ್ಲ ಎಂದು ಆದೇಶ ಕೊಡತಕ್ಕ ಸ್ಥಿತಿಯಲ್ಲಿ ಸರ್ಕಾರ ಇಲ್ಲ, ಅದಕ್ಕೆ ಅವಕಾಶನೂ ಇಲ್ಲ. ಆಮೇಲೆ 351 ಕೆಪಿಎಸ್‌ಸಿ ಒಪ್ಪಿಗೆಗಾಗಿ ನಾವು ಕಳಿಸಿಕೊಟ್ಟಿದ್ದೇವೆ. ಅದು ಕೆಪಿಎಸ್‌ಸಿನಲ್ಲಿ ಪೆಂಡಿಂಗ್ ಇದೆ. ಇದು ಆದಮೇಲೆ 318ರ ಪಟ್ಟಿ ತಯಾರಾಗಿದೆ; ಅದಕ್ಕೆ ಡಿಪಿಸಿ ಆಗಿದೆ; ಡಿಪಿಸಿ ಆಗಬೇಕು, ಕೆಪಿಸಿಗೆ ಕಳಿಸಬೇಕು. ಕೆಪಿಎಸ್‌ಸಿನವರು ಅದನ್ನು ಒಪ್ಪಿ ಕಳಿಸಿಕೊಡಬೇಕು. ಈ ಎಲ್ಲಾ ಹರ್ಡಲ್‌ಗಳು, ವ್ಯವಸ್ಥೆಗಳು ಇರುವುದರಿಂದ ಇದನ್ನು ಮೀರಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಈಗೇನು 312ರ ಪ್ರಕಾರ ಪೆಂಡಿಂಗ್ ಇದೆ ಎಂದು ಹೇಳುತ್ತಿದ್ದೀರಿ, ಇದನ್ನು ಆದಷ್ಟು ಬೇಗ ಜಾಗ್ರತೆಯಾಗಿ ತೀರ್ಮಾನ ಮಾಡಬೇಕೆಂದು ಆಸೆ ಇಟ್ಟುಕೊಂಡು ಕೆಲಸ ಮಾಡುತ್ತಿದೆ. ಯಾವುದೇ ರೀತಿ ನಿರಾಸೆ ಪಡಬೇಕಾದದ್ದು ಇಲ್ಲ. ಇದರ ಬಗ್ಗೆ ಚಿಂತನೆ ಮಾಡತಕ್ಕ ದೃಷ್ಟಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಸಭಾಧ್ಯಕ್ಷರೆ ನಾನು ನಿರ್ದಿಷ್ಟವಾಗಿ ಪ್ರಶ್ನೆ ಕೇಳಿದ್ದೇನೆ. 251 ಜನ ಹೆಡ್ ಮಾಸ್ಟರ್ ಪೋಸ್ಟನ್ನು ಖಾಯಂ ಮಾಡಲಿಕ್ಕೆ ಕೆಪಿಎಸ್‌ಸಿಗೆ ಯಾವ ಡೇಟಿಗೆ ಬರೆದಿದ್ದೀರಿ ಎಂದು. ಕಾರಣ ತಾವು ಇನ್ನೊಂದು ಉತ್ತರದಲ್ಲಿ ಹೇಳಿದಿರಿ. ಕೆಪಿಎಸ್‌ಸಿಗೆ ನಿಯಂತ್ರಣೆ ಇಲ್ಲ, ನಾವು ಯಾವತ್ತು ಕಳಿಸಿಕೊಡಬೇಕು ಎಂದು ಹೇಳಿ ಬಲವಂತ ಮಾಡುವ ಹಾಗೆ ಇಲ್ಲ ಎಂದು ತಾವು ಹೇಳಿದ್ದೀರಿ. ಕೆ.ಪಿಎಸ್‌ಸಿ ಛೇರ್ಮನ್ ಅವರನ್ನು ಅಪಾಯಿಂಟ್ ಮಾಡತಕ್ಕದ್ದು ರಾಜ್ಯ ಸರ್ಕಾರ. ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರತಕ್ಕ ಒಂದು ಇಲಾಖೆ ಎಂದು ನಾನು ಭಾವಿಸಿದ್ದೇನೆ. ದಯಮಾಡಿ ತಾವು ವಿವರಣೆ ಕೊಡಬೇಕು.

ಅಧ್ಯಕ್ಷರು:- ಈಗ ಮುಖ್ಯ ನ್ಯಾಯಾಧೀಶರಿಗೆ ಗವರ್ನರ್ ಪ್ರಮಾಣ ವಚನ ಬೋಧಿಸುತ್ತಾರೆ. ಹಾಗಾದರೆ ಜಡ್‌ಮೆಂಟ್ ಮಾಡುವಾಗಲೆಲ್ಲ ಗವರ್ನರ್ ಅವರನ್ನು ಕೇಳಬೇಕೇ? ಗೋಪಾಲಗೌಡರು ಬಂದಿರುವಂತಹ ಕ್ಷೇತ್ರದಿಂದ ಬಂದವರು ನೀವು. ಹೀಗಾದರೆ ಹೇಗೆ? ಪಿಎಸ್‌ಸಿ ಕೆಲಸ ಮಾಡತಕ್ಕ ವಿಧಾನವೇ ಬೇರೆ. ಅವರು ಉತ್ತರ ಕೊಡಲಿ.

ಶ್ರೀ ಅರಗ ಜ್ಞಾನೇಂದ್ರ:- ಸಾರ್ ನನಗೆ ಗೊತ್ತಿದೆ. ಹಾಗೆ ಇವರು ಬರೆದು ಒಂದು ವರ್ಷದ ಮೇಲಾಗಿದೆ. ಇವತ್ತೂ ಕೂಡ ಅಲ್ಲಿಂದ ಕಳಿಸುವುದಿಲ್ಲ ಎಂದರೆ ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎನ್ನುವಂಥದ್ದನ್ನಾದರೂ ಹೇಳಲಿ. ಇವರೆಲ್ಲಾ ನಿವೃತ್ತಿ ಆಗುತ್ತಿದ್ದಾರೆ. ದಯಮಾಡಿ ಇವರ ಜೀವನದ ಕೊನೆ ಅವಧಿಯಲ್ಲಿ ಇವರಿಗೆ ಒಂದು ಹೆಡ್‌ಮಾಸ್ಟರ್ ಹುದ್ದೆ ಕೊಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಮಂತ್ರಿಗಳಿಗೆ ಇರತಕ್ಕ ಕಳಕಳಿ ಖಂಡಿತವಾಗಿಯೂ ಪ್ರಾಮಾಣಿಕ ಎಂದು ನಾನು ನಂಬುತ್ತೇನೆ. ಆದರೆ ಇದನ್ನು ಚುರುಕುಗೊಳಿಸದೇ ಹೋದರೆ ನಿಮ್ಮ ಕಳಕಳಿಗೆ ಬಹುಶಃ ಅರ್ಥ ಬರಲಿಕ್ಕೆ ಇಲ್ಲ ಎಂದು ನನಗೆ ಅನಿಸುತ್ತದೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ನನ್ನದೇ ಇಲಾಖೆ ಆಗಲೀ ಬೇರೆಯಾವುದೇ ಆದರೂ ಚುರುಕುಗೊಳಿಸುವುದಕ್ಕೆ ನಾನು ಸತತ ಪ್ರಯತ್ನ ಪಡುತ್ತೇನೆ, ಅದು ಆಶ್ವಾಸನೆ ಕೊಡುತ್ತೇನೆ, ಖಂಡಿತ ಚುರುಕುಗೊಳಿಸುತ್ತೇನೆ. ಇದು ಸ್ವಾಯತ್ತತೆ ಇರತಕ್ಕಂಥ ಒಂದು ಸಂಸ್ಥೆ ಆಗಿರುವುದರಿಂದ ಚುರುಕುಗೊಳಿಸತಕ್ಕ ಒಂದು ಪದ ಉಪಯೋಗಿಸಿಕೊಳ್ಳುವುದಕ್ಕೆ ಕಷ್ಟ ಆಗುತ್ತದೆ. ನಾವು ಅವರಿಗೆ ಕೇಳಿಕೊಂಡು ಆದಷ್ಟು ಜಾಗ್ರತೆಯಾಗಿ ಕಳುಹಿಸಿ ಎಂದು ಅನೇಕ ಸಾರಿ ಬರೆದಿದ್ದೇನೆ.

ಅಧ್ಯಕ್ಷರು:- ಸದಸ್ಯರ ಭಾವನೆಯನ್ನು ಅವರಿಗೆ ತಿಳಿಸಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಸದಸ್ಯರ ಕಳಕಳಿ ನನಗೆ ಅರ್ಥ ಆಗಿದೆ. ಕಳಕಳಿಗೆ ಸಾಧ್ಯವಾದಷ್ಟು ಜಾಗ್ರತೆ ಇದನ್ನು ಮಾಡಬೇಕು ಎನ್ನುವ ಆಸೇನೂ ಇದೆ, ಚುರುಕುಗೊಳಿಸತಕ್ಕ ಪ್ರಶ್ನೆ ಅವರಿಗೆ ಬರುವುದಿಲ್ಲ. ದಯವಿಟ್ಟು ಕಳಿಸಿಕೊಡಿ, ಆರು ತಿಂಗಳಾಗಿದೆ, ವರ್ಷ ಆಗಿದೆ ಎಂಟು ತಿಂಗಳು ಆಗಿದೆ ಎಂದು ಹೇಳಿ ಆದಷ್ಟು ಜಾಗ್ರತೆಯಾಗಿ ಇದನ್ನು ತೀರ್ಮಾನ ಮಾಡುತ್ತೇವೆ.

ವಿಷಯ:- ಮೈಸೂರು ಚಲುವಾಂಬ ಆಸ್ಪತ್ರೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 121 (929)

ಶ್ರೀ ಎ.ರಾಮದಾಸ್ (ಕೃಷ್ಣರಾಜ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಚಲುವಾಂಬ ಆಸ್ಪತ್ರೆಯಲ್ಲಿ ಮೂಲಭೂತ ಸೌಲಭ್ಯಗಳಿಂದ